ಸ್ಫೂರ್ತಿಕಥನ



# ಸೈಕಲ್‌ಪಟುವಿನ ಅಪರೂಪದ ಜಾಗೃತಿ ಯಾತ್ರೆ

■ ಸುಬ್ರಮಣ್ಯ ಎಚ್.ಎಂ.

ಆ ದಿನ ಮಾರ್ಚ್ ತಿಂಗಳ ಉರಿ ಬಿಸಿಲು. ರಸ್ತೆಗಳು ಕಾದು ಕೆಂಡ ಆಗಿದ್ದವು. ಇಂತಹ ಸುಡು ಮುಂಜಾನೆಯಲ್ಲಿ 60 ವರ್ಷದ ಸೈಕಲ್‌ಪಟುವೊಬ್ಬರು ದೆಹಲಿವರೆಗೂ ಶುದ್ಧ ಕುಡಿಯುವ ನೀರಿಗಾಗಿ ಜಾಗೃತಿ ಯಾತ್ರೆ ಹೊರಟರು. ಒಲ್ಲದ ಮನಸ್ಸಿನಿಂದಲೇ ಕುಟುಂಬ, ಸ್ನೇಹಿತರು, ಸಂಘಟನೆಗಳು, ಹಿತೈಷಿಗಳು ಬೀಳ್ಕೊಟ್ಟರು.

ಇವರ ಸೈಕಲ್ ಯಾತ್ರೆಯಲ್ಲಿ ಹತ್ತು ಮಂದಿ ಜತೆಗೂಡಿದ್ದರು. ಬಾಗೇಪಲ್ಲಿ ದಾಟುವಷ್ಟರಲ್ಲೇ ರಣ ಬಿಸಿಲು ಸಹಿಸಲಾಗದೆ ಐದು ಮಂದಿ ಹಿಂದೆ ಸರಿದರು. ರಾಜ್ಯದ ಗಡಿ ದಾಟಿ ಆಂಧ್ರಪ್ರದೇಶದ ಅನಂತಪುರ ತಲುಪುತ್ತಿದ್ದಂತೆಯೇ ಬಿಸಿಲ ಪ್ರಖರತೆ ಏರತೊಡಗಿತು.

ದಿನದಲ್ಲಿ ಮುಂಜಾನೆ 5ರಿಂದ ಸಂಜೆ 4ರವರೆಗೆ 80ರಿಂದ 100 ಕಿ.ಮೀ. ಸೈಕಲ್ ತುಳಿಯೋದು, ನಂತರ ವಿರಾಮ. ಹೆದ್ದಾರಿ ಪಕ್ಕದ ಪೆಟ್ರೋಲ್ ಬಂಕ್, ಸಮೀಪದಲ್ಲಿ ಇರುವ ಗ್ರಾಮದ ಶಾಲೆ, ದೇವಸ್ಥಾನ, ಪಾಳು ಪಡಸಾಲೆಯೇ ವಿಶ್ರಾಂತಿಗೆ ತಂಗುದಾಣ. ಅಲ್ಲಿಯೇ ಅಡುಗೆ, ಊಟ, ನಿದ್ದೆ. ಇದು ಇವರ ಯಾತ್ರೆಯ ದಿನಚರಿ.

‘ಹೈದರಾಬಾದ್ ತಲುಪುವ ಹೊತ್ತಿಗೆ ಐವರಲ್ಲಿ ಇಬ್ಬರು ವಾಪಸಾದರು. ಮತ್ತೊಬ್ಬ ಸೈಕಲ್‌ಪಟು ಉತ್ತರ ಪ್ರದೇಶದವರೆಗೂ ಬಂದು ಹಿಂತಿರುಗಿದರು. ಕೊನೆಗೆ ಉಳಿದಿದ್ದು ಶಿಷ್ಯನಾದ ನವೀನ್ ಮತ್ತು ನಾನು’– ಬೀರಮಾನಹಳ್ಳಿ ಶ್ರೀನಿವಾಸ್ 2016ರಲ್ಲಿ ಕೈಗೊಂಡ ಸೈಕಲ್ ಜಾಗೃತಿ ಯಾತ್ರೆ ನೆನಪುಗಳನ್ನು ಹೆಕ್ಕಿದರು.

‘ಆ ದಿನ ಸೈಕಲ್ ಯಾತ್ರೆ ಸೀತಾಗೊಂದಿ ಗ್ರಾಮ ತಲುಪಿದಾಗ ಮುಸ್ಸಂಜೆ. ತೆಲಂಗಾಣದ ಆದಿಲಾಬಾದ್ ಜಿಲ್ಲೆ ದಂಡಕಾರಣ್ಯ ನಕ್ಸಲ್ ಬಾಧಿತ ವ್ಯಾಪ್ತಿಯ ಗ್ರಾಮವದು. ಕೆಲವಷ್ಟೇ ಮಣ್ಣಿನ ಹೆಂಟೆಗಳಿಂದ ಕಟ್ಟಿರೋ ಮನೆಗಳು. ಉಳಿದವು ಸೋಗೆ ಗುಡಿಸಲು. ವಿದ್ಯುತ್ ದೀಪ ಇಲ್ಲ, ಎಲ್ಲೋ ಒಂದೊಂದು ಬುಡ್ಡಿದೀಪ ಮಿಣುಕುತ್ತಿತ್ತು. ದೂರದ ಓಣಿಯೊಂದರ ಮೂಲೆ ಮನೆಯಲ್ಲಿ ವಿದ್ಯುತ್ ದೀಪ ಬೆಳಗುತ್ತಿತ್ತು. ಅದು ಆ ಊರ ಭೂಮಾಲೀಕನ ಮಾಳಿಗೆ ಮನೆ ಎಂದು ಗೊತ್ತಾಯಿತು. ಪಾಳುಬಿದ್ದ ಬಯಲಿನಲ್ಲೇ ನಾವು ಬಿಡಾರ ಹೂಡಿದೆವು.’

‘ಮುಂಜಾನೆ ಎಂದಿನಂತೆ ಆ ಊರಿನ ಬಾವಿ ಬಳಿ ನಿತ್ಯಕರ್ಮ ಮುಗಿಸಿ, ಚಪಾತಿ, ಕಾಳುಪಲ್ಯ ಸವಿದು ಯಾತ್ರೆ ಸಾಗಿತು. ಮಧ್ಯಾಹ್ನದ ಹೊತ್ತಿಗೆ ವಿಪರೀತ ಸೆಕೆ. ತಡೆಯಲಾರದಷ್ಟು ನೀರಿನ ದಾಹ. ಹೆದ್ದಾರಿ ಪಕ್ಕದ ಗ್ರಾಮವೊಂದರ ಶಾಲಾ ಆವರಣಕ್ಕೆ ಹೋದಾಗ ಆ ಊರಿನ ಸರಪಂಚ್ ಗಲಿಬಿಲಿಗೊಂಡು ಧಾವಿಸಿ ಬಂದರು. ‘ಅನ್ನಗಾರು ಇಕ್ಕಡ ಅವಕಾಶಂ ಲೇದು. ಈ ಪಲ್ಲೇಟು ಪೆದ್ದಯ್ಯಗಾರಿ ಪರ್ಮಿಶನ್ ಕಾವಾಲಿ’. (ಅಣ್ಣಂದಿರೆ, ಇಲ್ಲಿ ತಂಗಲು ಅವಕಾಶ ಇಲ್ಲ. ಈ ಊರಿನ ದೊಡ್ಡ ಯಜಮಾನ್ರು ಅನುಮತಿ ಬೇಕು) ಭಯಭೀತರಾಗಿ ಸರಪಂಚ್, ಅಲ್ಲಿಂದ ಜಾಗ ಖಾಲಿ ಮಾಡಿಸಿದರು’.

